ಓ.ಎಸ್. ನಂ. 187/2017

ಪಿ.ಡಬ್ಲ್ಯು: 01 (ಈರಪ್ಪ)

**ದಿನಾಂಕ: 31.10.2025 ರಂದು ಪಾಟೀ ಸವಾಲಿಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು 2 ನೇ ಪ್ರತಿವಾದಿ ಪರ ವಕೀಲರಿಂದ: ಶ್ರೀ.ಡಿ.ಜಿ.ಬಿ**

ನನ್ನ ತಂದೆಯ ಹೆಸರು ಚಿಟ್ಟಪ್ಪ. ನನ್ನ ತಾಯಿಯ ಹೆಸರು ಜಾನಕವ್ವ. ನನ್ನ ತಂದೆ ತಾಯಿಗೆ ವಾದಿಗಳಿಬ್ಬರೆ ಮಕ್ಕಳು. 3 ನೇ ವಾದಿ ಎಂದು ತೋರಿಸುವವರು ನಮ್ಮ ಕುಟುಂಬಕ್ಕೆ ಸಂಬಂಧ ಇಲ್ಲ. 2 ನೇ ಪ್ರತಿವಾದಿ ದಾವ ಸ್ವತ್ತು ನಮ್ಮದು ಎಂದು ಹೇಳಿದ ಕಾರಣ ಅವನ್ನು ಸೇರಿಸಿರುತ್ತೇನೆ. 2 ನೇ ಪ್ರತಿವಾದಿ ದಾವ ಸ್ವತ್ತನ್ನು ಖರೀದಿ ಮಾಡಿರುವ ಕಾರಣದಿಂದ ಅವರನ್ನು ಈ ದಾವೆಯಲ್ಲಿ ಸೇರಿಸಿದ್ದು ನನ್ನ ತಾಯಿ ದಾವ ಆಸ್ತಿಯನ್ನು ಮಾರಾಟ ಮಾಡಿದ ಬಗ್ಗೆ ನನಗೆ ಸಂಪೂರ್ಣವಾಗಿ ಗೊತ್ತು ಎಂದರೆ ಸರಿಯಲ್ಲ. ದಾವ ಆಸ್ತಿ ಒಟ್ಟು 4.4 ಸೆಂಟ್ಸ್ ಇದೆ. ದಾವ ಆಸ್ತಿಯ ಚೆಕ್ ಬಂದಿ ನನಗೆ ಗೊತ್ತಿಲ್ಲ. ದಾವ ಆಸ್ತಿ ಮೂಲತಃ ಯಾರದು ಎಂದರೆ ನಮ್ಮ ಆಸ್ತಿ ಆಗಿರುತ್ತದೆ. ಸಾಕ್ಷಿ ಮುಂದುವರೆದು ನಾವು ಸಣ್ಣವರಾದ ಕಾರಣ ಅದು ನಮ್ಮ ತಾಯಿಯ ಹೆಸರಿಗೆ ಮಾಡಲಾಗಿದೆ.

ದಾವ ಆಸ್ತಿ ನನ್ನ ತಂದೆಯ ಆಸ್ತಿ ಎಂದು ವಾದ ಪತ್ರದಲ್ಲಿ ಬರೆಸಿದ್ದು ಅದರ ಬಗ್ಗೆ ಯಾವುದಾದರು ದಾಖಲಾತಿ ಇದೆಯೇ ಎಂದರೆ ಇಲ್ಲ ಸಾಕ್ಷಿ ಮುಂದುವರೆದು ನಾವೆಲ್ಲಾ ದುಡಿದು ನಮ್ಮ ತಾಯಿಯ ಹೆಸರಿಗೆ ಮಾಡಿಸಿರುತ್ತೇವೆ. ದಾವಾ ಆಸ್ತಿ ಮೊದಲಿನಿಂದ ನನ್ನ ತಾಯಿಯ ಹೆಸರಿಗೆ ಬರುತ್ತಿದೆ ಎಂದರೆ ಹೌದು. ನನ್ನ ತಾಯಿ ಸ್ವಂತ ದುಡಿಮೆಯಿಂದ ದಾವಾ ಆಸ್ತಿಯನ್ನು ಖರೀದಿ ಮಾಡಿದ ಕಾರಣ ಅದು ಅವರ ಸ್ವಂತ ಆಸ್ತಿ ಎಂದರೆ ಸರಿಯಲ್ಲ. ಖರೀದಿ ಮಾಡಿದ ನಂತರ ನನ್ನ ತಾಯಿಯ ಹೆಸರಿಗೆ ಖಾತಾ ಬದಲಾವಣೆಯಾಗಿರುತ್ತದೆ ಎಂದರೆ ಹೌದು. ಅದನ್ನು ಖರೀದಿ ಮಾಡಿದ ನಂತರ ಅವರೇ ಸಂಪೂರ್ಣ ಮಾಲೀಕರಾಗಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ತಾಯಿಯ ಸ್ವಂತ ಆಸ್ತಿಯಾದ ಕಾರಣ ಅದನ್ನು ಅವರು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಅವರು ಎಂದಿಗೂ ಮಾರಾಟ ಮಾಡಿರುವುದಿಲ್ಲ. ಆದಾದ ನಂತರ 2 ನೇ ಪ್ರತಿವಾದಿಯ ಹೆಸರಿಗೆ ಖಾತಾ ಬದಲಾವಣೆಯಾಗಿದೆ ಎಂದರೆ ಸರಿಯಲ್ಲ. ಫಾರಂ ನಂಬರ್ 21 ಕ್ಕೆ

ಓ.ಎಸ್. ನಂ. 187/2017

ಪಿ.ಡಬ್ಲ್ಯು 01 (ಈರಪ್ಪ)

ನಾನು ಮತ್ತು ನನ್ನ ತಾಯಿ ಸಹಿ ಮಾಡಿರುತ್ತೇವೆ ಎಂದರೆ ಇಲ್ಲ. ದಾವ ಆಸ್ತಿ ನನ್ನ ತಾಯಿಯಸ್ವಂತ ಆಸ್ತಿಯಾಗಿದ್ದು ಅದನ್ನು ಅವರು ಮಾರಾಟ ಮಾಡಿರುವ ಕಾರಣ ನಮಗೆ ಅದರಲ್ಲಿ ಯಾವುದೇ ಭಾಗ ಇಲ್ಲ, ಅದು ನಮ್ಮ ತಂದೆಯ ಆಸ್ತಿ ಅಲ್ಲ ಎಂದರೆ ಸರಿಯಲ್ಲ. 2017 ನೇ ಇಸವಿಯಲ್ಲಿ ನನ್ನ ತಾಯಿಯಾದ 1 ನೇ ಪ್ರತಿವಾದಿ ನನ್ನೊಂದಿಗೆ ವಾಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ಸ್ವಂತ ದುಡಿಮೆಯಿಂದ ದಾವ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದರೆ, ನಾವೆಲ್ಲಾರೂ ಸೇರಿ ಖರೀದಿ ಮಾಡಿದ್ದೇವೆ. ನನ್ನ ತಾಯಿಯ ಆಸ್ತಿ ಆದ್ದರಿಂದ ಅವರು ಮಾರಾಟ ಮಾಡಿದ್ದು  ಆ ಬಗ್ಗೆ ನಮಗೆ ಗೊತ್ತಿದ್ದರೂ ಸಹ 2 ನೇ ಪ್ರತಿವಾದಿಯಿಂದ ಹೆಚ್ಚಿನ ಹಣವನ್ನು ಪಡೆಯಲು ಈ ರೀತಿ ಸುಳ್ಳು ದಾವೆಯನ್ನು ಹಾಕಿರುತ್ತೇವೆ ಎಂದರೆ ಸರಿಯಲ್ಲ. ನಮಗೆ ಈ ದಾವಾ ಆಸ್ತಿಯಲ್ಲಿ ಯಾವುದೇ ಭಾಗ ಇಲ್ಲ, ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವ ಆಸ್ತಿಯನ್ನು 2 ನೇ ಪ್ರತಿವಾದಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವ ಆಸ್ತಿ ನಮ್ಮ ತಂದೆಯ ಆಸ್ತಿ ಆಗದೇ ಇರುವ ಕಾರಣ ಹಾಗೂ ಇದನ್ನು ನನ್ನ ತಾಯಿ ಸ್ವಂತ ದುಡಿಮೆಯಿಂದ ಖರೀದಿ ಮಾಡಿರುವುದರಿಂದ ನಮಗೆ ಯಾವುದೇ ಹಕ್ಕನ್ನು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯಃ

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.